ಅಧ್ಯಕ್ಷರು:– ಶೆಟ್ಟರ್‌ರವರೆ, ಅದನ್ನು ನಾನು clarify ಮಾಡಿಕೊಂಡೆ.

ಶ್ರೀ ಜಗದೀಶ್ ಶೆಟ್ಟರ್:– ಬೇರೆ police station ನಲ್ಲಿದ್ದವರನ್ನು ಇಲ್ಲಿಗೆ ಏಕೆ ಕರೆಸಿದಿರಿ?

ಅಧ್ಯಕ್ಷರು:– ಬಂಡೆ ಇದ್ದಾರಲ್ಲ, ಅವರು Crime Sub Inspector. ಅವರು ಎಲ್ಲಾ ಕಡೆ ಇರುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಅವರು ಎಲ್ಲಾ ಕಡೆ ಹೋಗಬಹುದು.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಅವರನ್ನು ಅಲ್ಲಿ ಇಟ್ಟು ತನಿಖೆ ಮಾಡುವುದಕ್ಕಾಗುವುದಿಲ್ಲ. ಬಂಡೆಯವರ ಪತ್ನಿ ಮಾತನಾಡುವ ಯಂತ್ರ ಎಂದು IGP ಹೇಳುತ್ತಾರೆ, ಇವರೇನು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೋ? ಬಂಡೆಯವರ ಹೆಂಡತಿಗೆ ಸಂತಾಪ ಮಾಡುವುದು ಬಿಟ್ಟು ಇವರು ಅಪಮಾನ ಮಾಡುತ್ತಿದ್ದಾರೆ. ಅವರನ್ನು ಅಲ್ಲಿಯೇ ಇಟ್ಟು ತನಿಖೆ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ತಕ್ಷಣ ಅವರನ್ನು ಅಲ್ಲಿಂದ ತೆಗೆಯಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಪಾಟೀಲ್‌ರವರು ಸದನದ ಬಾವಿಗೆ ಆಗಮಿಸಿದರು)

ಅಧ್ಯಕ್ಷರು:– ಆಯಿತು, ಅವರು ಆಗುವುದಿಲ್ಲವೆಂದರೆ. ...

(ಗೊಂದಲ)

ಅಧ್ಯಕ್ಷರು:– ದಯವಿಟ್ಟು, ಚರ್ಚೆ ಮಾಡುವುದು ಬೇಡ. ಸ್ವಲ್ಪ ಅವಕಾಶ ಕೊಡಿ. ವಿಚಾರ ಮಾಡಿ.

(ಗೊಂದಲ)